
ಬೆಳ್ಳಿ ಹಬ್ಬದ ವರ್ಷ

# ಉತ್ಥಾನ

ಜೂನ್ ೧೯೯೨ ನಾಲ್ಕು ರೂಪಾಯಿ



ಅಭಿವೃದ್ಧಿಯೋ,
ಮಾನವಕುಲ
ಪತನವೋ ?

'ವಚನೋದ್ಯಾನದ ಅನುಭಾವಿ
ಡಾ. ಸಿದ್ಧಯ್ಯ ಪುರಾಣಿಕ

# ಉತ್ಥಾನ

ಮಾಸಪತ್ರಿಕೆ

ಗೌ॥ ಪ್ರಧಾನ ಸಂಪಾದಕ
ಎಸ್. ಆರ್. ರಾಮಸ್ವಾಮಿ

ವಾರ್ಷಿಕ ಚಂದಾ : ರೂ. ೪೮
ಬಿಡಿ ಪ್ರತಿ : ರೂ. ೪-೦೦

ನಿರ್ವಾಹಕ ಸಂಪಾದಕ
ವೈ. ಚ. ಜಯದೇವ

ಮುದ್ರಣ
ರಾಷ್ಟ್ರೋತ್ಥಾನ ಮುದ್ರಣಾಲಯ
ಕೆಂಪೇಗೌಡನಗರ
ಬೆಂಗಳೂರು - ೫೬೦ ೦೧೯

ಪ್ರಕಾಶಕರು
ಉತ್ಥಾನ ಟ್ರಸ್ಟ್
ಬೆಂಗಳೂರು

ದೂರವಾಣಿ : ೬೨೦೨೫೪


## ಮುಂದಿನ ಸಂಚಿಕೆಯಲ್ಲಿ

ಬಿಡುಗಡೆ : ಜೂನ್ ಕೊನೆಯ ವಾರದಲ್ಲಿ

- ಧರ್ಮಪಾಲ್ ಅವರ ಸಮೀಕ್ಷೆ :
  **ಜಗತ್ತಿನ ಕಳೆದೈದು ಶತಮಾನಗಳು**
- ಸುಧಾ ಸಿ. ಗೌಡ ಅವರ ಬಹುಮಾನಿತ ಕಥೆ :
  **ಒಂದು ಕೊಲೆಯ ಸುತ್ತ**
- ಜೆ. ಕೆ. ಸದಾನಂದಮೂರ್ತಿ ಅವರ ಲಘುಬರಹ :
  **ಆತ್ಮವೃತ್ತ**
- ಎ. ಚಿದಾನಂದಗೌಡ ಅವರ ಕಿರುನಾಟಕ :
  **ಮಾರ್ಜಾಲ**

# ತೆರೆತೆರೆದಂತೆ


ಸಂಪುಟ ೨೪   ಸಂಚಿಕೆ ೧೦   ಜೂನ್ ೧೯೯೨


## ಕಥೆಗಳು, ಮಿನಿಕಥೆಗಳು, ಲಘುಬರಹಗಳು


ಎಲ್ಲಿಯೋ ನೋಡಿದರುತಿದೆ — ಗುರುನಾಥ ಇನಾಮದಾರ ೧೪
ಟಾಪ್‌ರೈಟರ್ (ಧಾರಾವಾಹಿ - ೫) — ಪಾನುಗಂಟಿ ೨೦
ದೋಚಿದವರು — 'ಪ್ರಭಾ' ೪೪
ಪರಿವರ್ತನೆ (ಬಹುಮಾನಿತ ಕಥೆ) — ಸಿ. ಕೆ. ಚಂದ್ರಿಕಾ ೪೬
ಲಗ್ನವೂ ಆಯಿತು, ದೇವರೂ ಸಿಕ್ಕಿತು — ಕೆ. ನಾರಾಯಣ ಹೆಗಡೆ ಕೋರೆ ೭೪
ಜಗತ್ತಿನ ಕೊನೆಯ ಹಸಿದ ವ್ಯಕ್ತಿ — ಮಂಶಾ ಯಾದ್/ಡಿ. ಎನ್. ಶ್ರೀನಾಥ್ ೯೨
ಮಾರ್ಪಾಡು — ಕಲಾ ಚಾರಿ ೯೬


## ಲೇಖನಗಳು, ಕವನಗಳು


ಬೊಫೋರ್ಸ್ ಹಗರಣ ಮುಚ್ಚಿಹೋಗುವುದೆ ? — ಗೋಪಾಲರಾವ ಹೇಜೀಬ ೫
'ವಚನೋದ್ಯಾನ'ದ ಅನುಭಾವಿ ಡಾ॥ ಸಿದ್ಧಯ್ಯ ಪುರಾಣಿಕ
— ಕೊತ್ತಪಲ್ಲಿ ಶೇಖರ ೮
ಪ್ರಜಾಪ್ರಭುತ್ವ - ಒಂದು ಜೀವನವಿಧಾನ
— ಎಸ್. ರಾಧಾಕೃಷ್ಣನ್/ಬಿ. ಕಾ. ಮೂರ್ತೀಶ್ವರಯ್ಯ ೫೪
ತುಳುನಾಡ 'ಗರೊಡಿ'ಗಳ ಸಾಂಸ್ಕೃತಿಕ ಅಧ್ಯಯನ (ಗ್ರಂಥಸಮೀಕ್ಷೆ)
— ಟಿ. ಕೇಶವಭಟ್ಟ ೫೮
ಅಭಿವೃದ್ಧಿಯೋ, ಮಾನವಕುಲ ಹತ್ಯೆಯೋ ? — 'ಚಿಂತಕ' ೬೮
ನಮ್ಮ ನಗರ (ಕವನ) — ತುರುವೇಕೆರೆ ಪ್ರಸಾದ್ ೮೨
ಅಸಮ ದಾಂಪತ್ಯದ ವಿಷಮ ಪ್ರಸಂಗ (ಸಾಹಿತ್ಯರತ್ನ) — ಕೆ. ಶ್ರೀಕಂಠಯ್ಯ ೮೩
ಚೀನೀ ಸೌತೆಬೇರಿನ ಕಥೆ — 'ಗೌರಿ ಅಭಿ' ೮೯
ಎರಡು ಕವನಗಳು — ಸರೋಜ್ ಕುಮಾರ್/ರಸಿಕ ಪುತ್ತಿಗೆ ೯೮
ಜೀವನ-ಗರಿಮೆ : ಸಹನೆ (ವ್ಯಕ್ತಿತ್ವ ವಿಕಾಸ) — ಮಾ. ಭ. ಪೆರ್ಲ ೧೦೦



ಮುಖಪುಟ : ಕೋವಲಂ
ವಿನ್ಯಾಸ : ಕಮಲೇಶ್   ವರ್ಣಪಾರದರ್ಶಿಕೆ : ದೇಬಬ್ರತ ಬ್ಯಾನರ್ಜಿ

● ವಿಶೇಷ ಲೇಖನ

# 'ವಚನೋದ್ಯಾನ'ದ ಅನುಭಾವಿ ಡಾ॥ ಸಿದ್ಧಯ್ಯ ಪುರಾಣಿಕ

* ಕೊತ್ತಪಲ್ಲಿ ಶೇಖರ

**ಗತಕಾಲವೆ, ನಿನ್ನನ್ನು ಪ್ರೀತಿಸಬಲ್ಲೆ**
**ಪೂಜಿಸಲಾರೆ ನಾನು :**
**ವರ್ತಮಾನವೆ, ನಿನ್ನನ್ನು ಆದರಿಸಬಲ್ಲೆ**
**ಅರ್ಚಿಸಲಾರೆ ನಾನು :**
**ಭವಿಷ್ಯತ್ತೆ, ನಿನ್ನನ್ನು ಸ್ವಾಗತಿಸಬಲ್ಲೆ**
**ಸಮಾರಾಧಿಸೆ ನಾನು :**
**ಕಾಲವೆ, ನಿನ್ನ ಕೆಳೆ ಬೇಕು, ಆಳಿಕೆ**
**ಬೇಡ ನನಗೆ !**
**ನಿನ್ನ ಪ್ರವಾಹ ಕೊಂಡೊಯ್ದತ್ತ ತೇಲಲು**
**ಸತ್ತ ಮೀನೇನಲ್ಲ ನಾನು.**
**ನಿನಗೆ ಬೇಕಾದತ್ತ ನೀನೆಳೆ, ನನಗೆ**
**ಬೇಕಾದತ್ತ ನಾನೀಸುವೆ !**

– ವಚನೋದ್ಯಾನ

'ಕಾವ್ಯಾನಂದ' ಕಾವ್ಯನಾಮದ ಡಾ॥ ಸಿದ್ಧಯ್ಯ ಪುರಾಣಿಕರು ತಹಶೀಲ್ದಾರರಾಗಿ ನೇಮಕ ಗೊಂಡಾಗ, ಆಗ್ಗೇ ಪುರಾಣಿಕರ ಸಾಹಿತ್ಯದ ಬಗೆಗಿನ ಶ್ರದ್ಧೆ, ಉತ್ಸಾಹಗಳನ್ನು ಗಮನಿಸಿದ್ದ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು "ಇದು ಕನ್ನಡಕ್ಕೊಂದು ನಷ್ಟ" ಎಂದಿದ್ದರಂತೆ.

ಆನಂತರ ೧೯೪೭ರಲ್ಲಿ ಹರಪನಹಳ್ಳಿಯಲ್ಲಿ ನಡೆದ ಮೂವತ್ತನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಯ ಅಧ್ಯಕ್ಷಸ್ಥಾನಕ್ಕೆ ನಿಯುಕ್ತರಾಗಿದ್ದ ಪುರಾಣಿಕರು ಮಾಸ್ತಿಯವರಿಗೆ ಹೇಳಿದರಂತೆ : "ಸರ್, ನಾನು ತಹಶೀಲ್ದಾರನಾಗಿ ಆಯ್ಕೆಯಾದಾಗ 'ಇದು ಕನ್ನಡಕ್ಕೊಂದು ನಷ್ಟ' ಎಂದು ತಾವು ಹೇಳಿದ್ದಿರಿ. ನಾನು ಕನ್ನಡದ ಕೈ ಬಿಡುವುದಿಲ್ಲ. ತಮ್ಮ ಆಶೀರ್ವಾದವಿದ್ದರೆ. ಸರ್ಕಾರಿ ಸೇವೆಯಲ್ಲಿದ್ದೇ ತಾವು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದಂತೆ, ನಾನೂ ಕೈಲಾದಷ್ಟು ಕನ್ನಡ ಸಾಹಿತ್ಯ ಸೇವೆಯನ್ನು ಮಾಡುತ್ತೇನೆ. ತಮ್ಮಷ್ಟಲ್ಲದಿದ್ದರೂ ನನ್ನ ಯೋಗ್ಯತೆಯಿರುವಷ್ಟು ಮಾಡುತ್ತೇನೆಂದು ಮಾತು ಕೊಡುತ್ತೇನೆ."

ಅಂದು ಡಾ॥ ಮಾಸ್ತಿಯವರಿಗೆ ಕೊಟ್ಟ ಮಾತನ್ನು ನಡೆಸಿಕೊಟ್ಟಿದ್ದಾರೆಂಬುದಕ್ಕೆ ಎಪ್ಪತ್ತೈದನೆಯ ವಯಸ್ಸಿಗೆ ಕಾಲಿಡುತ್ತಿರುವ ಡಾ॥ ಪುರಾಣಿಕರು (ಜನನ : ೧೮-೬-೧೯೧೮) ಇಂದಿಗೂ ಬರವಣಿಗೆಯ ಕಾಯಕದಲ್ಲಿ ತೊಡಗಿರುವುದೇ ಸಾಕ್ಷಿ.

ಸರ್ಕಾರದ ಬಗೆಬಗೆಯ ಉನ್ನತ ಹುದ್ದೆಗಳನ್ನು ವಹಿಸಿಕೊಂಡು ಒಬ್ಬ ನಿಷ್ಠಾವಂತ ಅಧಿಕಾರಿಯಾಗಿ ಹೆಸರುಗಳಿಸಿ, ಜೊತೆಜೊತೆಗೇ ಸಾಹಿತ್ಯ ರಚನೆಯನ್ನೂ ಮಾಡುತ್ತಬಂದ ಪುರಾಣಿಕರು ಹೊಸಗನ್ನಡದ ಒಬ್ಬ ಮುಖ್ಯ ಲೇಖಕರೆನಿಸಿದ್ದಾರೆ.

ಡಾ॥ ಸಿದ್ಧಯ್ಯ ಪುರಾಣಿಕರು ಎರಡು ಕಾರಣಗಳಿಂದ ಮುಖ್ಯರೆನಿಸುತ್ತಾರೆ : ಒಂದು, ಮಾಸ್ತಿ, ಕೆ. ನರಸಿಂಹಮೂರ್ತಿ ಮೊದಲಾದವರಂತೆ ವೃತ್ತಿಯಿಂದ ಉನ್ನತ ಅಧಿಕಾರಿಯಾಗಿದ್ದೂ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರ ಪರಂಪರೆಗೆ ಸೇರಿದವರಾಗಿ. ಎರಡು, ಆಧುನಿಕ ವಚನಕಾರರಲ್ಲಿ ಪ್ರಮುಖರೆಂದು ಗುರುತಿಸಬಹುದಾದ ಎಸ್. ವಿ. ರಂಗಣ್ಣ, ಜ.ಚ.ನಿ., ಎಸ್. ವಿ. ಪರಮೇಶ್ವರ ಭಟ್ಟರ ಸಾಲಿಗೆ ಸೇರುವ ಪ್ರಮುಖ ವಚನಕಾರರಾಗಿ.

ಸಿದ್ಧಯ್ಯ ಪುರಾಣಿಕರು ಜನಿಸಿದ್ದು ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ದ್ಯಾಂಪುರ ಎಂಬ ಹಳ್ಳಿಯಲ್ಲಿ. ತಂದೆ ವೈದ್ಯಭೂಷಣ ಕಲ್ಲಿನಾಥಶಾಸ್ತ್ರಿಗಳು. ತಾಯಿ ದಾನಮ್ಮ. ಸಾಹಿತ್ಯ, ಸಂಸ್ಕೃತಿಗಳ ಬಗೆಗೆ ಅಗಾಧ ತೀವ್ರ ಇದ್ದ ಕಲ್ಲಿನಾಥಶಾಸ್ತ್ರಿಗಳು ಸ್ವತಃ ಕವಿಗಳು ಕೂಡ. ಪುರಾಣಿಕರ ತಾತ 'ಚನ್ನಕವಿ'ಗಳೆಂದೇ ಹೆಸರಾಗಿದ್ದವರು. ಹಾಗಾಗಿ ಕಾವ್ಯ, ಪುರಾಣ, ಶಾಸ್ತ್ರಗಳ ಬಗೆಗೆ ಚರ್ಚೆ, ಉಪನ್ಯಾಸಗಳು ಮನೆಯಲ್ಲಿ ನಡೆಯುತ್ತಲೇ ಇರುತ್ತಿದ್ದವು. ಸಹಜವಾಗಿಯೆ ಈ ಎಲ್ಲ ಚಟುವಟಿಕೆಗಳು ಬಾಲ್ಯದಲ್ಲಿ ಪುರಾಣಿಕರ ಮೇಲೆ ಬೌದ್ಧಿಕವಾಗಿ ಪ್ರಭಾವ ಬೀರಿದವು.



### ಮೊದಲಿಗ

ಪುರಾಣಿಕರ ಪ್ರಾರಂಭಿಕ ವಿದ್ಯಾಭ್ಯಾಸ ಕುಕ್ಕನೂರಿನ ವಿದ್ಯಾನಂದ ಗುರುಕುಲದಲ್ಲಿ. ಗಾಂಧಿವಾದಿ ಪಾ. ಭಿ. ದೇಸಾಯಿಯವರು ಇವರ ಗುರುಗಳು. ಮುಂದೆ ಪ್ರೌಢಶಾಲೆಯ ಓದು ಕಲ್ಬುರ್ಗಿಯಲ್ಲಿ. ಅಲ್ಲಿ ನಿಜಾಮರ ಆಳ್ವಿಕೆಯಾದ್ದರಿಂದ ಉರ್ದು ಭಾಷೆಗೇ ಪ್ರಾಶಸ್ತ್ಯ. ಪುರಾಣಿಕರೂ ಉರ್ದು ಕಲಿತರು. ಆ ದಿನಗಳಲ್ಲಿಯೆ ತವಗ ಭೀಮಸೇನರಾಯರಂಥ ಪ್ರಸಿದ್ಧ ಪಂಡಿತರ ಸಂಪರ್ಕದಿಂದ ಕನ್ನಡದ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಈ ಮಧ್ಯೆ ಆಲಮಟ್ಟಿಯ ಆಶ್ರಮದಲ್ಲಿ ಕರ್ನಾಟಕದ ಗಾಂಧಿಯೆಂದೇ ಪ್ರಸಿದ್ಧರಾಗಿದ್ದ ಹರ್ಡೇಕರ್ ಮಂಜಪ್ಪನವರಲ್ಲಿ ಕೆಲ ಕಾಲ ವಾಸ್ತವ್ಯ. ಅಲ್ಲಿದ್ದ ದಿನಗಳು ಇವರ ವ್ಯಕ್ತಿತ್ವ ವಿಕಸನಕ್ಕೆ ಸಹಾಯ ಮಾಡಿದವು. ಪುರಾಣಿಕರು ತಮ್ಮ ಜ್ಞಾನತೃಷೆಯನ್ನು ನೀಗಿಸಿಕೊಳ್ಳಲು


2

ಅನೇಕ ಗ್ರಂಥಗಳನ್ನು ಓದಿದರು. ಹಾಗೆಯೆ ಮಂಜಪ್ಪನವರ ಸಾತ್ವಿಕ ಬದುಕು, ಸರ್ವಧರ್ಮ ಸಮನ್ವಯ. ದೃಷ್ಟಿ ಇವರ ಮೇಲೆ ಮಹತ್ವದ ಪ್ರಭಾವ ಬೀರಿದವು.

ಪುರಾಣಿಕರು ಹುಟ್ಟು ಪ್ರತಿಭಾವಂತರು. ತಮ್ಮ ವಿದ್ಯಾಭ್ಯಾಸದುದ್ದಕ್ಕೂ ಪ್ರಥಮ ಸ್ಥಾನ ಇವರಿಗೇ ಮೀಸಲು. ಫಲವಾಗಿ ಪ್ರತಿ ತರಗತಿಯಲ್ಲೂ ತಪ್ಪದೆ ವಿದ್ಯಾರ್ಥಿವೇತನ.

ಆಲಮಟ್ಟಿಯ ಆಶ್ರಮದಿಂದ ಬಂದ ನಂತರ ಇಂಟರ್ ಮುಗಿಸಿ, ಉಸ್ಮಾನಿಯಾ ವಿಶ್ವ ವಿದ್ಯಾಲಯದಿಂದ ಬಿ. ಎ. ಪದವಿ ಪಡೆದರು. ಮುಂದೆ ಎಲ್‌ಎಲ್.ಬಿ. ತರಗತಿಗೆ ಸೇರಿದರು. ಆದರೆ ಓದು ಮುಂದುವರಿಯಲಿಲ್ಲ.

### ದಕ್ಷ ಅಧಿಕಾರಿ

ಓದು ಮುಗಿದ ತರುಣದಲ್ಲೆ ಸರ್ಕಾರಿ ಸೇವೆಗೆ ಸೇರಿದ ಪುರಾಣಿಕರು, ತಮ್ಮ ವೃತ್ತಿಜೀವನ ಆರಂಭಿಸಿದ್ದು ತಹಶೀಲ್ದಾರರಾಗಿ. ಹಳೆಯ ಹೈದರಾಬಾದ್ ಹಾಗೂ ಹೊಸ ಮೈಸೂರು ರಾಜ್ಯಗಳೆರಡರಲ್ಲಿಯೂ ಸೇವೆ ಸಲ್ಲಿಸಿದ ಇವರು ಮುಂದೆ ಅಸಿಸ್ಟೆಂಟ್ ಕಮಿಷನರ್, ಡೆಪ್ಯುಟಿ ಕಲೆಕ್ಟರ್, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ, ಕೊಡಗು, ಬೆಳಗಾವಿಗಳಲ್ಲಿ ಜಿಲ್ಲಾಧಿಕಾರಿ, ಕಾರ್ಮಿಕ ಕಮಿಷನರ್, ಸಾರಿಗೆ ಕಮಿಷನರ್ – ಹೀಗೆ ಮೂರು ದಶಕಗಳ ಕಾಲ (ನಿವೃತ್ತಿ : ೧೯೭೨) ಅನೇಕ ರೀತಿಯ ಉನ್ನತಾಧಿಕಾರಗಳನ್ನು ಸಮರ್ಥವಾಗಿ ನಿರ್ವಹಿಸಿದರು.

ಗಡಿ ಪ್ರದೇಶಗಳಲ್ಲಿ ಕನ್ನಡದ ಸ್ಥಿತಿ ಉತ್ತಮಗೊಳ್ಳಲು ಕಾರಣರಾದರು. ಕನ್ನಡ ನಿಘಂಟು, ವಿಶ್ವಕೋಶ ಯೋಜನೆಗಳಿಗೆ ಚಾಲನೆ ನೀಡಿದರು. ವಾರ್ತಾ ಮತ್ತು ಪ್ರವಾಸೋದ್ಯಮ ನಿರ್ದೇಶಕರಾಗಿದ್ದಾಗ ಸರ್ಕಾರದ ಜಾಹಿರಾತು ನೀತಿಯನ್ನು ಸಡಿಲಗೊಳಿಸಿ ಸಣ್ಣ ಪತ್ರಿಕೆಗಳಿಗೂ ಸರ್ಕಾರದ ಜಾಹಿರಾತು ಸಿಗುವಂತೆ ಮಾಡಿದರು.

ಡಾ॥ ಪುರಾಣಿಕರು ಪ್ರಮುಖ ಪಾತ್ರ ವಹಿಸಿದ್ದರಿಂದ ಇವತ್ತು ಬೀದರ್ ಜಿಲ್ಲೆಯ ಬಸವಕಲ್ಯಾಣ ನಮ್ಮದಾಗಿ ಉಳಿದಿದೆ ಎಂಬುದು ಅನೇಕರಿಗೆ ಗೊತ್ತಿಲ್ಲ.

ಡಾ॥ ಪುರಾಣಿಕರ ಕನ್ನಡಪರ ಕಾಳಜಿಯನ್ನು ಜಿ. ನಾರಾಯಣರ ಈ ಮಾತುಗಳು ಸ್ಪಷ್ಟಪಡಿಸುತ್ತವೆ : "ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಖಿಲವಾಗುತ್ತಿದ್ದ ಕಾಲದಲ್ಲಿ ಅದಕ್ಕೊಂದು ಹಿರಿಯ ಸ್ಥಾನ ಕಲ್ಪಿಸಿಕೊಟ್ಟರು. ನಿರ್ಜೀವವಾಗಿದ್ದ ಅನೇಕ ಕನ್ನಡ ಸಂಸ್ಥೆಗಳಿಗೆ ತಮ್ಮ ತನು ಮನ ಧನಗಳಿಂದ ಜೀವ ತುಂಬಿದರು. ತಮ್ಮ ದಕ್ಷತೆ ಮತ್ತು ನಿಃಸ್ಪೃಹತೆಗಳಿಂದ ಮೇಲೇರಿ ಬಂದು ಕರ್ನಾಟಕ ರಾಜ್ಯ ಉದಯವಾದ ಮೇಲೆ ಅಖಂಡ ಕರ್ನಾಟಕದ ಸೇವೆಗಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟರು."

ಡಾ॥ ಸಿದ್ಧಯ್ಯ ಪುರಾಣಿಕರು ನಾಂದೇಡ ಎಂಬಲ್ಲಿ ಅಧಿಕಾರಿಯಾಗಿದ್ದಾಗ ನಡೆದ ಒಂದು ಪ್ರಸಂಗವಿದು :

ಲೆವಿ ವಸೂಲಾತಿಗಾಗಿ ನಾಂದೇಡ ಎಂಬ ಹಳ್ಳಿಗೆ ರಾಮರಾವ್ ಎಂಬ ತಹಶೀಲ್ದಾರರು ಹೋದಾಗ ರೈತರೆಲ್ಲ ಸೇರಿ ಅವರನ್ನು ಕೊಲೆಮಾಡಿದರು. ಇದು ಇಲಾಖೆಯ ಎಲ್ಲರಿಗೂ ಆತಂಕವನ್ನುಂಟುಮಾಡಿತು. ತಕ್ಷಣ ಒಂದು ಸಭೆ ಕರೆದ ಜಿಲ್ಲಾಧಿಕಾರಿಗಳು "ಆ ಹಳ್ಳಿಯಲ್ಲಿ ಲೆವಿ ವಸೂಲಿ ಮಾಡುವ ಧೈರ್ಯ ಯಾರಿಗೂ ಇಲ್ಲವೆ ?" ಎಂದು ಸವಾಲು ಹಾಕಿದರು. ಕೂಡಲೆ ಪುರಾಣಿಕರು ಆ ಕೆಲಸವನ್ನು ವಹಿಸಿಕೊಂಡರು. ಆ ಹಳ್ಳಿಯ ಬಡವರನ್ನು ಗುರುತಿಸಿದರು. ಅವರಿಂದ ಲೆವಿ ವಸೂಲು ಮಾಡದೆ ಅವರಿಗೆ ರೇಷನ್ ಕಾರ್ಡುಗಳನ್ನು ಬರೆದುಕೊಟ್ಟರು. ಇದರಿಂದ ಬಡವರಿಗಾಗುವ ಅನ್ಯಾಯ ತಪ್ಪಿತು. ಶ್ರೀಮಂತರು ತಾವಾಗಿಯೇ ಲೆವಿ ಕೊಡಲು ಮುಂದಾದರು.

ಈ ಘಟನೆ ಡಾ॥ ಪುರಾಣಿಕರ ಸಾರ್ವಜನಿಕ ವ್ಯವಹಾರ ಚತುರತೆಗೆ ಉತ್ತಮ ಉದಾಹರಣೆ.

### ಸಾಹಿತ್ಯ ಪರಿಚಾರಿಕೆ

ಮನೆತನದ ಸುಶಿಕ್ಷಿತ ಪರಿಸರ, ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಾಂದೋಲನದ ಜಾಗೃತ ಪ್ರಜ್ಞೆ, ಸಾಮಾಜಿಕ ಸ್ಥಿತ್ಯಂತರಗಳು, ಉನ್ನತ ಅಧಿಕಾರಗಳಿಂದ ಪ್ರಾಪ್ತವಾದ ಸಾರ್ವಜನಿಕ ಸಂಪರ್ಕ, ಲೋಕಾನುಭವ, ಪಂಪ, ಕುಮಾರವ್ಯಾಸರನ್ನು ಓದಿ ಪಡೆದ ಜೀವನಪ್ರೀತಿ, ಉನ್ನತ ಆದರ್ಶಗಳು, ಬಸವ ಮತ್ತಿತರ ವಚನಕಾರರಿಂದ ಅರಗಿಸಿಕೊಂಡ ವಾಸ್ತವಪ್ರಜ್ಞೆಯ ವಿಚಾರ ವೈಭವ, ಶೇಕ್ಸ್‌ಪಿಯರ್, ವರ್ಡ್ಸ್‌ವರ್ತ್‌ರಂಥ ಕವಿಗಳಿಂದ ದಕ್ಕಿಸಿಕೊಂಡ ಪ್ರಕೃತಿಪ್ರೀತಿ – ಈ ಎಲ್ಲವೂ ಪುರಾಣಿಕರ ಸಾಹಿತ್ಯರಚನೆಗೆ ಇಂಬು ಗೊಟ್ಟವು.

ಕಲ್ಬುರ್ಗಿಯಲ್ಲಿ ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ಒಂದು ಕವನ ಸ್ಪರ್ಧೆಯಲ್ಲಿ 'ಬೆಳಗು' ಎಂಬ ಕವನಕ್ಕೆ ಬಹುಮಾನ ಪಡೆಯುವುದರ ಮೂಲಕ ಸಾಹಿತ್ಯಲೋಕವನ್ನು ಪ್ರವೇಶಿಸಿದ ಪುರಾಣಿಕರು, ಆಲಮಟ್ಟಿ ಆಶ್ರಮದಲ್ಲಿ, ನಂತರ ಕಾಲೇಜು ಓದುತ್ತಿದ್ದ ಅವಧಿಯಲ್ಲಿ ಕಾವ್ಯರಚನೆ ಮುಂದುವರಿಸಿದರು. 'ಜಯಕರ್ನಾಟಕ', ಹರ್ಡೇಕರ್ ಮಂಜಪ್ಪನವರೇ ನಡೆಸುತ್ತಿದ್ದ 'ಶರಣ ಸಂದೇಶ' – ಮೊದಲಾದ ಪತ್ರಿಕೆಗಳಲ್ಲಿ ಪುರಾಣಿಕರ ಬರಹಗಳು ಅಚ್ಚಾದವು. ಆ ದಿನಗಳಲ್ಲೆ 'ಆತ್ಮಾರ್ಪಣ' (೧೯೪೨) ಎಂಬ ತಮ್ಮ ಮೊದಲ ಸ್ವತಂತ್ರ ನಾಟಕವನ್ನು ರಚಿಸಿದರು.

ಕಾವ್ಯ, ನಾಟಕ, ಕಥೆ, ಕಾದಂಬರಿ, ಜೀವನ ಚರಿತ್ರೆ, ಶಿಶುಸಾಹಿತ್ಯ – ಹೀಗೆ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದರೂ ಮುಖ್ಯವಾಗಿ ಪುರಾಣಿಕರು ಕವಿಗಳೆಂದೇ ಪ್ರಸಿದ್ಧರು.

'ಜಲಪಾತ' (೧೯೫೩), 'ಕರುಣಾಶ್ರಾವಣ' (೧೯೫೫), 'ಕಲ್ಲೋಲಮಾಲೆ' (೧೯೬೮), 'ಮೊದಲು ಮಾನವನಾಗು' (೧೯೭೯) – ಮೊದಲಾದ ಕವನಸಂಗ್ರಹಗಳು, 'ವಚನೋದ್ಯಾನ' (೧೯೭೭), 'ವಚನ ನಂದನ' (೧೯೮೩) – ಎಂಬ ಪ್ರಸಿದ್ಧ ವಚನಸಂಗ್ರಹಗಳು, 'ತುಪ್ಪಾರೊಟ್ಟಿ ಗೇ ಗೇ ಗೇ' (೧೯೭೩), 'ಗಿಲ್ ಗಿಲ್ ಗಿಲಗಿಚ್ಚಿ' (೧೯೭೮), 'ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ' – ಎಂಬ ಶಿಶುಸಾಹಿತ್ಯ ಕೃತಿಗಳು, 'ಶರಣ ಚರಿತಾಮೃತ' (೧೯೬೪), 'ಸಿದ್ಧರಾಮ' (೧೯೭೪), 'ಹರ್ಡೇಕರ್ ಮಂಜಪ್ಪ' (೧೯೭೮), 'ಮಿರ್ಜಾ ಗಾಲಿಬ್' (೧೯೭೯) – ಮುಂತಾದ ಜೀವನಚರಿತ್ರೆಗಳು, 'ಕಥಾಮಂಜರಿ' (೧೯೪೯), 'ತುಷಾರಹಾರ' (೧೯೫೭) – ಎಂಬೆರಡು ಕಥಾ ಸಂಗ್ರಹಗಳು – ಹೀಗೆ ಪುರಾಣಿಕರ ಬರವಣಿಗೆ ಸುಮಾರು ಮೂವತ್ತಕ್ಕೂ ಹೆಚ್ಚು ಕೃತಿಗಳಲ್ಲಿ ಹರಡಿದೆ.

"ಸಿದ್ಧಯ್ಯನವರ ಕೌಟುಂಬಿಕ ವಾತಾವರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಿಂದಲೇ ದುಂದುಭಿಸುತ್ತಿದ್ದವು. ಪ್ರಾಯದ ಪ್ರಥಮ ಗ್ರಾಸದಲ್ಲಿಯೇ ಅವರು ಶರಣರ ಸಾಹಿತ್ಯವನ್ನು ಮುಕ್ಕಿದರು, ದೇಶಸೇವಾ ತತ್ಪರರಾದವರ ಸಂಗ ಸಹವಾಸಗಳಲ್ಲಿ ಕಾಲ ಕಳೆದರು. ಅವರು ಮಾಡಿದ ವಿದ್ಯಾಭ್ಯಾಸವೂ ಅವರ ಹೃದಯದವರೆಗೆ ಪ್ರವೇಶಮಾಡಿತು. ಇದೆಲ್ಲದರ ಪರಿಣಾಮವೆಂದರೆ ಅವರಲ್ಲಿ ಭಾವನೆಯ ವಾಯುವೇಗವೂ ಬುದ್ಧಿಯ ಅಗ್ನಿಗುಣವೂ ಸೇರಿಕೊಂಡಿವೆ...." – ಎಂದಿದ್ದಾರೆ, 'ಜಲಪಾತ' ಕವನ ಸಂಗ್ರಹದ ಮುನ್ನುಡಿಯಲ್ಲಿ ವರಕವಿ ಬೇಂದ್ರೆ.

ಬೇಂದ್ರೆಯವರೆನ್ನುವ 'ಭಾವನೆಯ ವಾಯುವೇಗವೂ ಬುದ್ಧಿಯ ಅಗ್ನಿಗುಣವೂ' ಸ್ಪಷ್ಟಗೊಳ್ಳುವ ಕೆಲವು ಕಾವ್ಯಪಂಕ್ತಿಗಳು ಇವು :

ಇಡಿಯ ಏಷ್ಯಾಖಂಡ ಹಿರಿಯ
ಬಂದೀಖಾನೆ
ಪರರ ಬಲೆಯಲ್ಲಿ ಸಿಕ್ಕಿಬಿದ್ದ ಮುದ್ದಾನೆ
ಇಲ್ಲಿ ಬಡತನ, ಅಜ್ಞಾನ, ದಾಸ್ಯ,
ಬಹುಬೇನೆ
ಮೇಲೆ ತುಳಿಯುತಲಿಹುದು ಪರರಾಷ್ಟ್ರಗಳ
ಸೇನೆ
ಇದಕುಂಟೆ ಈ ನರಕದಿಂದ ಮುಕ್ತಿ ?
ಎಂದು ಸಿಡಿದೇಳುವುದು ಇದರ ಶಕ್ತಿ ?
('ಜಲಪಾತ')

ನನ್ನ ಸ್ವಾತಂತ್ರ್ಯವೇ ನನ್ನ ರಾಗದ ಗುಟ್ಟು
ನನಗಿಲ್ಲ ಅವರಿವರ ಕಟ್ಟುನಿಟ್ಟು
ಎಡರು ಕಂಟಕಗಳನು ತೊಡೆದು
ದಾರಿಯ ಕೊರೆವ
ಕಾರ್ಯ ನನ್ನದು, ನಾನು ಆರದಿಹ ಸಿಟ್ಟು !
('ಜಲಪಾತ')

ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದ ದಿನಗಳಲ್ಲಿಯೇ ಪುರಾಣಿಕರ ಮೇಲೆ ಗಾಂಧಿಜೀ, ವಚನಕಾರರ ಗಾಢ ಪ್ರಭಾವವಿತ್ತು. ಮನುಷ್ಯ ನನ್ನು ಮನುಷ್ಯನನ್ನಾಗಿ ನೋಡದ ಅಸ್ಪೃಶ್ಯತೆಯ ಆಚರಣೆ ಕೆಟ್ಟದೆನಿಸಿತು. ಹರಿಜನರ ಮನೆಯಲ್ಲಿ ನೀರು ಕುಡಿದು ತಂದೆಯಿಂದ ಸರಿಯಾದುದನ್ನೇ ಮಾಡಿದೆ ಎಂದು 'ಶಹಭಾಸ್' ಪಡೆದರು. ಮಾನವ ಮಾನವನಾಗಿ ನಡೆದುಕೊಳ್ಳುವುದು ಇವತ್ತಿನ ತುರ್ತು ಎಂದೆನಿಸಿತು ಅವರಿಗೆ. ಈ ಭಾವನೆಯೆ ಮುಂದೆ ಅವರ ತೀರಾ ಪ್ರಸಿದ್ಧವಾದ ಕವನ 'ಮೊದಲು ಮಾನವನಾಗು' ಬರೆಯಲು ಪ್ರೇರಣೆಯಾಯಿತೆನ್ನಬಹುದು.

ಓದಿ ಬ್ರಾಹ್ಮಣನಾಗು, ಕಾದಿ
ಕ್ಷತ್ರಿಯನಾಗು,
ಶೂದ್ರ-ವೈಶ್ಯನೆ ಆಗು ದುಡಿದು ಗಳಿಸಿ,
ಏನಾದರೂ ಆಗು ನಿನ್ನೊಲವಿನಂತಾಗು
ಏನಾದರೂ ಸರಿಯೆ.... ಮೊದಲು
ಮಾನವನಾಗು !

'ಮಕ್ಕಳ ಪದ್ಯಗಳು ಗೇಯಗುಣದಿಂದ ಕೂಡಿದ್ದು ಮಕ್ಕಳ ಗಂಟಲೊಳಗೆ ಸುಲಭವಾಗಿ ಇಳಿಯುವಂತಿರಬೇಕು' ಎಂದು ಶಿಶುಕಾವ್ಯದ ಬಗೆಗೆ ಡಾ॥ ಶಿವರಾಮ ಕಾರಂತರು ಒಂದೆಡೆ ಹೇಳಿದ್ದಾರೆ. ಈ ಮಾತುಗಳು ಡಾ॥ ಪುರಾಣಿಕರ ಮಕ್ಕಳ ಪದ್ಯಗಳಿಗೆ ಚೆನ್ನಾಗಿ ಒಪ್ಪುತ್ತವೆ. ಹಲವು ಹಳೆಯ ಪ್ರಾಥಮಿಕ ತರಗತಿಗಳ ಪಠ್ಯಪುಸ್ತಕಗಳಲ್ಲಿ, ಕೆಲವು ಇಂದಿನ ಪಠ್ಯಪುಸ್ತಕ ಗಳಲ್ಲಿ ಇದ್ದ, ಇರುವ 'ಕರಡಿಯ ಕುಣಿತ', 'ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ', 'ಸಂಜಸ ಗೂಡಿನ ರಸಬಾಳೆ', 'ಅಜ್ಜನ ಕೋಲಿದು ನನ್ನಯ ಕುದುರೆ', 'ಬಣ್ಣದ ಗರಿಯಿದು ಮಣ್ಣೊಳು ದೊರೆಯಿತು' – ಮೊದಲಾದ ಪುರಾಣಿಕರ ಮಕ್ಕಳ ಪದ್ಯಗಳು ದೊಡ್ಡವರು ಮೆಲುಕುಹಾಕುವ, ಚಿಣ್ಣರು ಹಾಡಿ ಕುಣಿವ ಸರಳ, ಸುಂದರ ರಚನೆ ಗಳಾಗಿವೆ.

## 'ವಚನೋದ್ಯಾನ'

"ನನಗೆ ತೋರಿದಂತೆ ಬರೆದರೆ ಅದು ರಚನೆ, ನೀನು ತೋರಿಸಿದಂತೆ ಬರೆದರೆ ಅದು ವಚನವಯ್ಯ" ಎಂದು ತಮ್ಮ ವಚನಗಳ ಸ್ವರೂಪ, ವೈಶಿಷ್ಟ್ಯ ಗಳನ್ನು ಪ್ರಕಟಪಡಿಸುವ ಪುರಾಣಿಕರು 'ಸ್ವತಂತ್ರ ಧೀರ ಸಿದ್ಧೇಶ್ವರ' ಎಂಬ ಅಂಕಿತದಲ್ಲಿ ರಚಿಸಿದ ೫೨೫ ವಚನಗಳ ಸಂಗ್ರಹ 'ವಚನೋದ್ಯಾನ'.

"ಹೊಸಹೊಸ ಕಲ್ಪನೆಗಳು, ಹೊಸಹೊಸ ಉಪಮಾನಗಳು, ಹೊಸಹೊಸ ಪ್ರಾಸಗಳು, ಹೊಸ ಓಟ-ಕುಣಿತಗಳು ಎಲ್ಲ ಸೊಗಸು" ಎಂದು ಪುರಾಣಿಕರ 'ಕರುಣಾಶ್ರಾವಣ' ಕೃತಿಯ ಬಗೆಗೆ ಡಿ. ವಿ. ಜಿ.ಯವರು ಹೇಳಿರುವ ಮಾತುಗಳು 'ವಚನೋದ್ಯಾನ'ಕ್ಕೂ ಅನ್ವಯಿಸುತ್ತವೆ. ಕಾವ್ಯಪ್ರತಿಭೆ, ಅನುಭವ, ಚಿಂತನ, ದಾರ್ಶನಿಕತೆ, ಸಮಕಾಲೀನ ಪ್ರಜ್ಞೆ – ಈ ಎಲ್ಲವೂ ಏಕತ್ರ ಸಮಾವೇಶಗೊಂಡ ಪುರಾಣಿಕರ ಹೆಸರಾಂತ ಕೃತಿಯಿದು.

ಪುರಾಣಿಕರು ಸ್ವತಂತ್ರಧೀರ ಸಿದ್ಧೇಶ್ವರನಲ್ಲಿ ತಮ್ಮ ಅಂತರ್ಯದ ಭಾವನೆಗಳನ್ನು ತೋಡಿ ಕೊಳ್ಳುವಂತೆಯೆ ಸುತ್ತಣ ಪರಿಸರದಲ್ಲಿ ಅಧಃಪತನ ಗೊಳ್ಳುತ್ತಿರುವ ಜೀವನಮೌಲ್ಯಗಳ ಬಗ್ಗೆಯೂ ಆತಂಕ ವ್ಯಕ್ತಪಡಿಸುತ್ತಾರೆ.

ವಿದ್ಯೆ ಬಂತು, ವಿನಯ ಹೋಯ್ತು ;
ಬುದ್ಧಿ ಬಂತು, ಶ್ರದ್ಧೆ ಹೋಯ್ತು ;
ಶ್ರದ್ಧೆ ಬಂತು, ವಿವೇಚನೆ ಹೋಯ್ತು ;
ವಿಜ್ಞಾನ ಬಂತು, ಸಮಾಧಾನ
ಹೋಯ್ತು ;
ಶರೀರಸ್ವಾಸ್ಥ್ಯ ಬಂತು, ಚಿತ್ತಸ್ವಾಸ್ಥ್ಯ
ಹೋಯ್ತು ;
ದೀರ್ಘಾಯುಷ್ಯ ಬಂತು,
ಜೀವನ ಸ್ವಾರಸ್ಯ ಹೋಯ್ತು ;
......................
ಜಾತಿ ಬಂತು, ಪ್ರೀತಿ ಹೋಯ್ತು ;
ಸ್ವಾತಂತ್ರ್ಯ ಬಂತು, ಸೌಜನ್ಯ
ಹೋಯ್ತು ;
ಸಿದ್ಧಯ್ಯ ಪುರಾಣಿಕ ಬಂದ,
ಸ್ವತಂತ್ರಧೀರ ಸಿದ್ಧೇಶ್ವರ ಹೋದ !
(ವಚನೋದ್ಯಾನ – ೧೦೦)





ಹೋಮರನಂಥ ವಿಶ್ವಕವಿಗಳು ಭಿಕ್ಷೆ
ಬೇಡಬೇಕು
ಹೆಂಡ ಮಾರುವವರು ಲಕ್ಷಾಧೀಶರಾಗಬೇಕು
ಇದೇ ನಿನ್ನ ಸಾಮಾಜಿಕ
ನ್ಯಾಯವೇನಯ್ಯಾ ?
ದುಡಿದವರಿಗೆ ದುಗ್ಗಾಣಿ,
ದುಡಿಸಿಕೊಳ್ಳುವವರಿಗೆ ಅಷ್ಟೈಶ್ವರ್ಯ
ಇದುವೆ ನಿನ್ನ ಆರ್ಥಿಕ
ವ್ಯವಸ್ಥೆಯೇನಯ್ಯಾ ?
(ವಚನೋದ್ಯಾನ – ೩೨೭)

'ಬೆಳಕಿತ್ತ ದೀಪಕ್ಕೆ ಮಾನಪತ್ರ ಕೊಡುವ ರಾರಯ್ಯ ?', 'ಬದುಕುವುದು ಬಹು ಸುಲಭ ; ಬಾಳುವುದು ಕಠಿಣವಯ್ಯ', 'ಎನಿತು ಕುರೂಪ ಗಳು ನರನು ನಿರ್ಮಿಸಿದ ನಾಗರಿಕತೆಯಲ್ಲಿ!'– ಮುಂತಾದ ಹಲವು ಪ್ರೇರಕ ನುಡಿಮುತ್ತುಗಳು ಈ ಕೃತಿಯುದ್ದಕ್ಕೂ ಸಿಗುತ್ತವೆ.

ವಚನಕಾರರ ಆದರ್ಶವನ್ನಿಟ್ಟುಕೊಂಡು ಇಂದಿನ ಸಂದರ್ಭಕ್ಕೆ ಒಪ್ಪುವಂತೆ ರಚಿಸಿರುವ ಸಿದ್ಧಯ್ಯ ಪುರಾಣಿಕರ ವಚನಗಳ ವೈಶಿಷ್ಟ್ಯದ ಬಗ್ಗೆ ಡಾ॥ ಹಾ. ಮಾ. ನಾಯಕರು ಹೇಳಿರುವ ಮಾತುಗಳು ಇವು : "ಮುಖ್ಯ ಆಧುನಿಕ ವಚನಕಾರರಾದ ಶ್ರೀ ಜ. ಚ. ನಿ. ಅವರಲ್ಲಿ ಚೆ ನ್ನ ಬ ಸ ವ ಣ್ಣ ನ ಪಾರಿಭಾಷಿಕತೆಯಿದೆ ; ರಂಗಣ್ಣನವರಲ್ಲಿ ಬಸವಣ್ಣನ ವ್ಯಾವಹಾರಿಕತೆ ಯಿದೆ; ಪರಮೇಶ್ವರಭಟ್ಟರಲ್ಲಿ ಮಹಾದೇವಿಯಕ್ಕನ ಕಲಾತ್ಮಕತೆಯಿದೆ ; ಸಿ ದ್ಧ ಯ್ಯ ಪು ರಾ ಣಿ ಕ ರಲ್ಲಾದರೋ ಅಲ್ಲಮನ ಅನುಭಾವ ನಿಗೂಢತೆ ಸುಳಿಯುತ್ತದೆ."

ರಾಜ್ಯ ಸಾಹಿತ್ಯ ಅಕಾದೆಮಿ ಪ್ರಶಸ್ತಿ, ಮಾಳವಾಡ ಪ್ರಶಸ್ತಿ, ಕಲ್ಕತ್ತೆಯ ಭಾರತೀಯ ಭಾಷಾ ಪರಿಷತ್ತಿನ 'ಬಿಲ್ವಾರ' ಪ್ರಶಸ್ತಿ – ಹೀಗೆ ಹಲವು ಪ್ರಶಸ್ತಿಗಳನ್ನು ಪಡೆದಿರುವುದು ಈ ಕೃತಿಯ ಹಿರಿಮೆಗೆ ಸಾಕ್ಷಿ.

## ಗೌರವ ಪ್ರಶಸ್ತಿಗಳು

ಎಲ್ಲ ಕನ್ನಡಪರ ಚಳವಳಿಗಳಲ್ಲೂ ಭಾಗವಹಿಸಿ ಸಲಹೆ, ಸೂಚನೆಗಳನ್ನು ನೀಡುತ್ತ ಬಂದಿರುವ ಪುರಾಣಿಕರು ಶಿಕ್ಷಣ ಮಾಧ್ಯಮ, ಕನ್ನಡಿಗರಿಗೆ ಉದ್ಯೋಗ, ಗ್ರಂಥ ಪ್ರಕಟಣೆ, ವಲಸೆ ಸಮಸ್ಯೆ ಮುಂತಾದವುಗಳ ಬಗ್ಗೆ ಖಚಿತ ನಿಲುವನ್ನು ವ್ಯ ಕ್ತ ಪ ಡಿ ಸು ತ್ತಾ ರೆ. ಈ ಎಪ್ಪತ್ತೈದರ ಇಳಿವಯಸ್ಸಿನಲ್ಲೂ ಕನ್ನಡದ ಏಳ್ಗೆಗಾಗಿ ದುಡಿಯುತ್ತಿರುವ ಪುರಾಣಿಕರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟೊರೇಟ್ (೧೯೭೬), ರಾಜ್ಯ ಸಾಹಿತ್ಯ ಅಕಾದೆಮಿ ಬಹುಮಾನ (೧೯೭೮), ಮಾಳವಾಡ ನೆನಪಿನ ಬಹುಮಾನ (೧೯೮೧), ಬಿಲ್ವಾರ ಪ್ರಶಸ್ತಿ (೧೯೮೦), ಪುರಾಣಿಕರ ಮಿತ್ರರೂ ಗೆಳೆಯರೂ ಕೂಡಿ ಅರ್ಪಿಸಿದ ಅಭಿನಂದನ ಗ್ರಂಥ 'ಕಾವ್ಯಾನಂದ' (೧೯೮೧), 'ತುಪ್ಪಾರೊಟ್ಟಿ ಗೇ ಗೇ ಗೇ' ಎಂಬ ಶಿಶುಸಾಹಿತ್ಯ ಕೃತಿಗೆ ಭಾರತ ಸರ್ಕಾರದ ಬಹುಮಾನ, ಕಲ್ಬುರ್ಗಿಯಲ್ಲಿ ನಡೆದ ೫೮ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (೧೯೮೭), ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ – ಮುಂತಾದ ಹಲವು ಗೌರವ ಪುರಸ್ಕಾರ ಗಳು ಸಂದಿವೆ.

ಹಲವು ವರ್ಷಗಳ ಹಿಂದೆ ರಾಷ್ಟ್ರಕವಿ ಕುವೆಂಪು ಅವರು ಪುರಾಣಿಕರ ಬಗೆಗೆ ಹೇಳಿರುವ ಮಾತುಗಳಿಗೆ ನಾವೂ ದನಿಗೂಡಿಸಬಹುದು : "ಜ್ಞಾನ, ಅಧಿಕಾರ, ವಿನಯ, ಸೌಜನ್ಯ, ಸೃಜನ ಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪವಾದವೆನಿಸಿದ ಪ್ರತಿಭಾಶಾಲಿ ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು."